


**ಎಂ. ಎನ್. ವಿಜಯಕುಮಾರ್**
**ನಿವೃತ್ತ ಐಎಎಸ್ ಅಧಿಕಾರಿ, 1981 ಬ್ಯಾಚ್, ಕರ್ನಾಟಕ ಕೇಡರ್ ,**
**ಬೆಂಗಳೂರು.**
**ಫೋನ್ : 9343833168**
**ಇಮೇಲ್: mnvkumar@gmail.com**

**28th October 2016**

## ಪತ್ರಿಕಾ ಪ್ರಕಟಣೆ
## ಭಾರತದ ಉಕ್ಕಿನ ಫ್ರೇಮ್ ನಿಂದ ಭ್ರಷ್ಟಾಚಾರದ ಸೇತುವೆ

**(ಈ ಪತ್ರಿಕಾ ಪ್ರಕಟಣೆ ಮತ್ತು ಅದಕ್ಕೆ ಸಂಬಂಧಪಟ್ಟ ದಾಖಲೆಗಳು** http://depenq.com/steelfraud.html **ಯಲ್ಲಿ ಲಭ್ಯವಿದೆ - ಇದರಲ್ಲಿ ಯಾವುದೇ ಸಂದೇಹ ಬಂದರೆ ಮೂಲ ಇಂಗ್ಲಿಷ್ ಪ್ರಕಟಣೆಯನ್ನು ದಯವಿಟ್ಟು ನೋಡುವುದು)**

1. **ನಾನು 21st oct 2016 ಕ್ಕೆ Shri A.M. Naik, Chairman, L & T, Shri A.C.Alimchandani, Chairman, STUP, India, ಶ್ರೀ. ಎಸ್.ಸಿ. ಕುಂಟಿಯ, ಐಎಎಸ್,,ಮುಖ್ಯಕಾರ್ಯದರ್ಶಿಗಳು, .ಮಹೇಂದ್ರ ಜೈನ್, ಐಎಎಸ್, ಅಪರ ಮುಖ್ಯಕಾರ್ಯದರ್ಶಿಗಳು,ನಗರಾಭಿವೃದ್ಧಿ ಇಲಾಖೆ ಮತ್ತು ಡಾ. ರಾಜ್ ಕುಮಾರ್ ಖತ್ರಿ, ಐಎಎಸ್,ಆಯುಕ್ತರು, ಬಿ.ಡಿ.ಎ - ಇವರುಗಳಿಗೆ 10 ಅಂಶಗಳ ಪತ್ರ ಬರೆದು ಸ್ಪಷ್ಟನೆ ಕೇಳಿದೆ ವಿಷಯಗಳಿಗೆ, ನನಗೆ ಇದುವರೆಗೂ ಯಾವುದೇ ಉತ್ತರ ಬಂದಿಲ್ಲ. ಮಾಧ್ಯಮದ ಮೂಲಕ ಬಿಡುಗಡೆ ಮಾಡಿದ ಆ ಪತ್ರಕ್ಕೆ ಸಾರ್ವಜನಿಕವಾಗಿಯೂ ಇವರು ಯಾವುದೇ ಸ್ಪಷ್ಟನೆ ನೀಡಿಲ್ಲ. ನಗರಾಭಿವೃದ್ಧಿ ಮಂತ್ರಿ ಶ್ರೀ ಕೆ.ಜೆ.ಜಾರ್ಜ್ ರವರು ಜನಪ್ರತಿನಿಧಿಗಳಿಗೆ ಮತ್ತು ಮಾಧ್ಯಮದವರಿಗೆ ಮಾಡಿದ ಸಭೆಯಲ್ಲಿ ನಾನು ಕೇಳಿದ 10 ಅಂಶಗಳ ಪೈಕಿ ಒಂದಕ್ಕೂ ಸ್ಪಷ್ಟನೆ ನೀಡಲಿಲ್ಲ ಆ ಪತ್ರದಲ್ಲಿ ಉಲ್ಲೇಖಿಸಿರುವ File No DPE/MSI/10/2005 ನಲ್ಲಿ L&T ಸಂಸ್ಥೆಯ ಹೆಸರನ್ನು ಉಪಯೋಗ /ದುರುಪಯೋಗ ಮಾಡಿಕೊಂಡು ಹಿರಿಯ ಐಎಎಸ್ ಅಧಿಕಾರಿಗಳು ಸಾರ್ವಜನಿಕರ ಹಣ ಲೂಟಿ ಮಾಡಿರುವ ವಿವರಗಳಿವೆ. ಬಹಳಷ್ಟು ಸಲ ಕೇಳಿಕೊಂಡಿದ್ದರೂ ಈ ಕಡತವನ್ನು DPAR Principal Secretary, ಸರ್ಕಾರದ website ನಲ್ಲಿ ಹಾಕಿರುವುದಿಲ್ಲ. ಕೇರಳ ಸರ್ಕಾರ blacklist ಮಾಡಿದ ನಿರ್ಣಯವನ್ನು ಕೇರಳ High Court ಎತ್ತಿ ಹಿಡಿದ ಮೇಲೆ ಕರ್ನಾಟಕ ಸರ್ಕಾರವು ಅದಕ್ಕೆ ಏನು ನಿರ್ದೇಶನ ನೀಡಿತ್ತೆಂದು ಹಾಗೂ ಮೂರನೇ ಪರ್ಯಾಯ ಏಕೆ ಕೊಡಲಾಯಿತು ಎಂದು ನಾನು STUP ಸಂಸ್ಥೆಯನ್ನು ಕೇಳಿದ್ದೆನು. ಅವರೂ ಸಹ ಉತ್ತರ ಕೊಟ್ಟಿರುವುದಿಲ್ಲ**

2. **ನನ್ನ 21st oct 2016 ರ ಪತ್ರದಲ್ಲಿ ತಿಳಿಸಿರುವಂತೆ L&T ಸಂಸ್ಥೆಗೆ ಗುತ್ತಿಗೆ ಕೊಡಲು ಬಿಡಿಎ ಮತ್ತು ಕರ್ನಾಟಕ ಸರ್ಕಾರ ಮುಚ್ಚಿಟ್ಟಿರುವ ಹಲವಾರು ಅಂಶಗಳ ಜೊತೆಗೆ ಮತ್ತೊಂದು ಪ್ರಮುಖ ಅಂಶವೆಂದರೆ, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ (BIAL) ನಲ್ಲಿನ ಪಾರದರ್ಶಕತೆಯ ಕೊರತೆ ಮತ್ತು ಕಳಪೆ ಕಾಮಗಾರಿಯನ್ನು ತನಿಖೆ ಮಾಡಲು ಸ್ಥಾಪಿಸಲಾದ ಶ್ರೀ ಹೇಮಚಂದ್ರಸಾಗರ್ ನೇತೃತ್ವದ ಜಂಟಿ ಸದನ ಸಮಿತಿ 2009ರಲ್ಲಿ ತನ್ನ ವರದಿಯಲ್ಲಿ L&T ಮತ್ತು ಇನ್ನೆರಡು ಸಂಸ್ಥೆಯನ್ನು ಕನಿಷ್ಠ 5 ವರ್ಷಗಳ ಕಾಲ blacklist ಮಾಡಬೇಕೆಂಬ ಶಿಫಾರಸ್ಸು ಮಾಡಿರುವುದು :**

*"The central and state governments or their agencies should not consider the partners of the project - L&T, Siemens and Zurich - for entrustment of any work for five years,"*

ಸಮಿತಿಯು ನಿರೀಕ್ಷಿಸಿದಂತೆ , L&T ನಿರ್ಮಿಸಿದ runway ಕಳಪೆ ಗುಣಮಟ್ಟದ್ದು ಎಂದು ಬೆಳಕಿಗೆ ಬಂದು, ಗ್ಯಾರಂಟೀ ಅವಧಿ ಮುಗಿಯುವ ಮುನ್ನ, 2012 ರಲ್ಲಿ runwayಯನ್ನು ಪೂರ್ತಿ resurfacing ಮಾಡಲಾಯಿತು ಹಾಗೂ L&T ಸಂಸ್ಥೆಯ ವಿರುದ್ಧ warranty clause invoke ಮಾಡಲಾಯಿತು. ಮತ್ತೊಂದೆಡೆ, L&T ಸಂಸ್ಥೆ ,ಜಂಟಿ ಸದನ ಸಮಿತಿಯು ನೇಮಕ ಆದ ಅನೇಕ ತಿಂಗಳುಗಳನಂತರ ಹಾಗೂ ವರದಿಯನ್ನು ಮಂಡಿಸುವ ಸ್ವಲ್ಪ ದಿನಗಳ ಮುಂಚೆ, ಡಿಸೆಂಬರ್ 2009 ರಲ್ಲಿ,BIALನಲ್ಲಿದ್ದ ರೂ. 55 ಕೋಟಿಯ ತನ್ನ17% ಪಾಲನ್ನು ರೂ 686 ಕೋಟಿಗೆ ಮಾರಿಕೊಂಡಿತು. ಬೆಂಗಳೂರು ವಿಷನ್ ಗ್ರೂಪ್ ಒತ್ತಡದಿಂದ L&T ಸಂಸ್ಥೆಯನ್ನು blacklist ಮಾಡಲಿಲ್ಲ. ಈ ಪ್ರಮುಖ ಅಂಶವನ್ನು ಉದ್ದೇಶಪೂರ್ವಕವಾಗಿಯೇ ನಿರ್ಲಕ್ಷಿಸಿ ಕರ್ನಾಟಕ ಸರ್ಕಾರ L&T ಹಾಗು Nagarjuna Costructions ಕಂಪನಿಗಳಿಗೆ ಗುತ್ತಿಗೆ ನೀಡಿದೆ.

3. ಅತ್ಯಂತ ಪ್ರಸ್ತುತವಾದ ಇನ್ನೊಂದು ಅಂಶವೆಂದರೆ, ವಿಶ್ವ ಬ್ಯಾಂಕ್ (World Bank) ತನ್ನ 3rd ಮಾರ್ಚ್2013ರ ಆದೇಶದಲ್ಲಿ, L&T ಕಂಪನಿಯ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ ನಡೆಸಿದ ವಂಚನೆಗಾಗಿ, ಕಂಪನಿಯ ವಿರುದ್ಧ 6 ತಿಂಗಳುಗಳ ನಿರ್ಬಂಧ ವಿಧಿಸಿ , ಕಂಪನಿಯು ವಿಶ್ವ ಬ್ಯಾಂಕ್ ಹಣ ನೀಡುವ ಯಾವುದೇ ಯೋಜನೆಗಳಲ್ಲಿ ವ್ಯವಹರಿಸಬಾರದು ಎಂದು ಸ್ಪಷ್ಟಪಡಿಸಿತ್ತು. ತಮಿಳು ನಾಡಿನ ಆರೋಗ್ಯ ಯೋಜನೆಗೆ ಸಂಬಂಧಿಸಿದಂತೆ L&T ಕಂಪನಿ ವಂಚನೆ ಮಾಡಿತ್ತು(ನಕಲಿ ಪ್ರಮಾಣ ಪತ್ರಗಳನ್ನು ಕೊಟ್ಟಿತ್ತು). ಇಷ್ಟೇ ಅಲ್ಲದೆ, ವಿಶ್ವ ಬ್ಯಾಂಕ್ ಯೋಜನೆಗಳನ್ನು ಮಾಡುತ್ತಿರುವ ಯಾವುದೇ ಸಂಸ್ಥೆಗಳು ಲ್&ಟಿ ಕಂಪನಿಯನ್ನು ಉಪಗುತ್ತಿಗೆದಾರರು, ಸಲಹೆಗಾರರು ಅಥವಾ ತಯಾರಕರಾಗಿ ತೆಗೆದುಕೊಳ್ಳುವಂತಿಲ್ಲ ಎಂದು ಸ್ಪಷ್ಟಪಡಿಸಿತ್ತು. ಅನೇಕ ರೋಗಿಗಳು ಸಾವನ್ನಪ್ಪುವ ಸಂಭವವಿದ್ದುದರಿಂದ, ವಿಶ್ವ ಬ್ಯಾಂಕ್ L&T ಕಂಪನಿಗೆ ನೀಡಿದ್ದ ಗುತ್ತಿಗೆ ರದ್ದುಪಡಿಸಿ ಬೇರೊಂದು ಕಂಪನಿಗೆ ನೀಡಿತು. L&T ನೀಡಿದ 'rougue employee' ವಿವರಣೆಯಲ್ಲಿ ಯಾವುದೇ ಹುರುಳಿಲ್ಲ ಎಂದು ವಿಶ್ವ ಸಂಸ್ಥೆ ತೀರ್ಮಾನಿಸಿತು ಎಂಬ ವಿಷಯವು ಸಾರ್ವಜನಿಕವಾಗಿ ಲಭ್ಯವಿದ್ದರೂ, ಯಾವುದೇ ಅಧಿಕಾರಸ್ಥರಿಂದ ಕ್ರಮ ಆಗದಿರುವುದು ದುರುದೃಷ್ಟಕರ. ಸರ್ಕಾರವು ಇದುವರೆಗೂ ಮುಚ್ಚಿಟ್ಟಿರುವ File No DPE/MSI/10/2005 ಕಡತದಲ್ಲಿ L&T ಮತ್ತು ಇತರೆ ಕಂಪನಿಗಳು ಹಿರಿಯ ಐಎಎಸ್ ಅಧಿಕಾರಿಗಳ ಸಹಕಾರದಿಂದ ಸಾರ್ವಜನಿಕ ಹಣ ಲೂಟಿ ಮಾಡಲು ಅನುಸರಿಸಿದ ಅನೇಕ ವಂಚನೆ ಕ್ರಮಗಳನ್ನು ವಿವರಿಸಲಾಗಿದೆ.

4. M/s. Nagarjuna Constructions ಕಂಪನಿಯು ಸ್ಟೀಲ್ ಬ್ರಿಜ್ ಪ್ರಾಜೆಕ್ಟ್ ನಲ್ಲಿ L&T ಕಂಪನಿಯೊಂದಿಗೆ ಸಹಗುತ್ತಿಗೆ ಕಂಪನಿಯಾಗಿದೆ. CBI ವರದಿ ಆಧಾರದ ಮೇಲೆ ಪುದುಚೇರಿ ಸರ್ಕಾರವು 2012 ರಲ್ಲಿ M/s. Nagarjuna Constructions ಕಂಪನಿಯನ್ನು blacklist ಮಾಡಿತ್ತು. 15 ಮಾರ್ಚ2016 ರಂದು M/s. Nagarjuna Constructions ಕಂಪನಿ ಮಾಡಿದ್ದ ಗೋದಾವರಿ ನೀರು ಸರವರಾಜು ಕಾಮಗಾರಿಯಲ್ಲಿ ಬಾರಿ ನೀರು ಸೋರಿಕೆಯಾಗಿ ತೆಲಂಗಾಣ ಸರ್ಕಾರವು ಕಂಪನಿಯನ್ನು blacklist ಮಾಡಲು ಯೋಚಿಸಿತ್ತು (Annexure I - Page 9). 31ಮಾರ್ಚ್2016ರಂದು ಕೋಲ್ಕೊತಾ ಫ್ಲೈಓವರ್ ಬಿದ್ದ ಮೇಲೆ ಅಗರ್ತಲದಲ್ಲಿ M/s. Nagarjuna Constructions ಕಂಪನಿಯು ಕಟ್ಟುತ್ತಿದ್ದ ಬ್ರಿಜ್ ಕಳಪೆ ಮಟ್ಟದ್ದಾಗಿದೆ ಎಂಬ ಆತಂಕ ವ್ಯಕ್ತಪಡಿಸಲಾಗಿತ್ತು.

ಇದನ್ನು ದೃಢ ಪಡಿಸುವ ರೀತಿಯಲ್ಲಿ 21 ಏಪ್ರಿಲ್ 2016ರಂದು ಅಗರ್ತಾಲದ ಬ್ರಿಜ್ ಹೊರೆ ಪರೀಕ್ಷೆಯ ಸಮಯದಲ್ಲೇ ಕುಸಿದು ಬಿದ್ದಿತ್ತು(Annexure II -pages 10-11) ದಿನಾಂಕ 25th Oct 2016 ರಂದು ಒಂದು ಕನ್ನಡ ಟಿವಿ ವಾಹಿನಿಯಲ್ಲಿ ಪ್ರಸಾರಮಾಡಿದ ಕಾರ್ಯಕ್ರಮದಲ್ಲಿ *'ನಾಗಾರ್ಜುನ ಧೋಖಾ'* ಎಂದು ಪ್ರದರ್ಶಿಸಿದ್ದು, ಬಿಡಿಎ ಸಂಸ್ಥೆಯೇ ಇದರಿಂದ ವಂಚಿತಗೊಂಡಿತ್ತೆಂದು ತಿಳಿಸಲಾಯಿತು. ಆಗಲೇ L&T ಕಂಪನಿಗೆ ಮುಂಗಡ ಹಣವನ್ನು ನೀಡಲಾಗಿದೆಯೆಂದು ಸಹ ತಿಳಿಸಿತು (ಮಾಧ್ಯಮಗಳ ಪ್ರಕಾರ Letter of Acceptance ಅನುಮೋದನೆ ದೊರಕಿರುವುದು 26 ರಂದು .) L&T ಮತ್ತು M/s. Nagarjuna Constructions ಕಂಪನಿಗಳು ನಡೆದು ಬಂದ ದಾರಿಯನ್ನು ಬಿಂಬಿಸುವ ಗಂಭೀರವಾದ ಅಂಶಗಳನ್ನು ಬಿಡಿಎ ಆಯುಕ್ತರುಗಳು ( ಶ್ರೀ ಶಾಮಭಟ್ ಮತ್ತು ಶ್ರೀ ರಾಜ್ ಕುಮಾರ್ ಖತ್ರಿ ) , ಶ್ರೀ ಎಸ್.ಸಿ. ಕುಂಟಿಯ, ಐಎಎಸ್,,ಮುಖ್ಯಕಾರ್ಯದರ್ಶಿಗಳು, ಮತ್ತು ಶ್ರೀ ಮಹೇಂದ್ರ ಜೈನ್, ಐಎಎಸ್, ಅಪರ ಮುಖ್ಯಕಾರ್ಯದರ್ಶಿಗಳು, ನಗರಾಭಿವೃದ್ದಿ ಇಲಾಖೆ ಇವರುಗಳು ಪದೇ ಪದೇ ಗಮನಕ್ಕೆ ತಂದ ಬಳಿಕವೂ ಮುಚ್ಚಿಟ್ಟಿದ್ದಾರೆ.

5. ನಾನು ಪ್ರೆಸ್ ಕ್ಲಬ್ ಮೂಲಕ ಬಿಡುಗಡೆ ಮಾಡಿದ ಸಿಬಿಐ ಗೆ ಬರೆದ 24Oct2016ರ ಪತ್ರದಲ್ಲಿ CBI M/s. Nagarjuna Constructions ವಿರುದ್ದ ಪ್ರಕರಣ ದಾಖಲಿಸಿದ ನಂತರ ಅದ ಬೆಳವಣಿಗೆಗಳ ಬಗ್ಗೆ ತಿಳಿಸಲು ಕೋರಿದ್ದೆ. ಅವರಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

6. ಶ್ರೀ ಟಿ. ಎಂ. ವಿಜಯಭಾಸ್ಕರ್ ರವರನ್ನು 1stJan2016ರಂದು ಅಪರ ಮುಖ್ಯಕಾರ್ಯದರ್ಶಿಗಳು, ನಗರಾಭಿವೃದ್ದಿ ಇಲಾಖೆಗೆ ವರ್ಗಾವಣೆ ಮಾಡಲಾಯಿತು. ಆದರೆ 15thApril2016 ರಂದು ಆ ಸ್ಥಾನದಿಂದ ತೆಗೆದುಹಾಕಲಾಯಿತು. ಸ್ಟೀಲ್ ಬ್ರಿಜ್ ಪ್ರಾಜೆಕ್ಟ್ ಹಾಗೂ ಡಿನೋಟಿಫಿಕೇಷನ್ ಅಕ್ರಮಗಳಲ್ಲಿ ಭಾಗವಹಿಸಲು ನಿರಾಕರಿಸಿ ಅವರು ತಾವಾಗಿಯೇ ವರ್ಗಾವಣೆ ಕೇಳಿಕೊಂಡಿದ್ದರು. ವರ್ಗಾವಣೆ ಕೇಳಿ, ಆದ ಬಳಿಕ ಅಕ್ರಮಗಳ ಬಗ್ಗೆ ಸುಮ್ಮನಿರುವುದು ಖಂಡನೀಯವಾದುದ್ದು.

7. ಐಎಎಸ್ ಅಧಿಕಾರಿಗಳು ತಮ್ಮ ಕೆಳಗಿನ ಅಧಿಕಾರಿಗಳಿಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳಲ್ಲಿ ಕೋರ್ಟ ಗಳಿಗೆ ಸುಳ್ಳು ಅಫಿಡವಿಟ್ ಕೊಡುವಂತೆ ಒತ್ತಾಯಿಸುವುದನ್ನು ತಡೆಯಲು ಕ್ರಮ ತೆಗೆದುಕೊಳ್ಳಬೇಕೆಂದು ನಾನು Ministry of Law and Justice ಗೆ ಬರೆದ ಪತ್ರವನ್ನು ಅವರು ಕೇಂದ್ರ ಸರ್ಕಾರದ DoPT ಗೆ ಕಳುಹಿಸಿದ ಪತ್ರದ ಪ್ರತಿಯನ್ನು Annexure III - page 12 ರಲ್ಲಿ ಕೊಡಲಾಗಿದೆ.

8. ನಾನು 25Oct2016ರಂದು ಶ್ರೀಎಸ್.ಸಿ.ಕುಂಟಿಯ,ಐಎಎಸ್, ಮುಖ್ಯಕಾರ್ಯದರ್ಶಿಗಳು ಅವರಿಗೆ ಪತ್ರ ಬರೆದು, ಅದನ್ನು PIL ಆಲಿಸುತ್ತಿರುವ ಹೈ ಕೋರ್ಟ್ ಗಮನಕ್ಕೆ ತರಬೇಕೆಂದು ತಿಳಿಸಿದ್ದೆನು ಹಾಗೆಯೇ, ಶ್ರೀ ಟಿ. ಎಂ. ವಿಜಯಭಾಸ್ಕರ್ ರವರು ಪ್ರತ್ಯೇಕ ಅಫಿಡವಿಟ್ ಸಲ್ಲಿಸಿ ಸ್ಟೀಲ್ ಬ್ರಿಜ್ ಪ್ರಾಜೆಕ್ಟ್ ನಲ್ಲಿ ನಡೆಯುತ್ತಿರುವ ಅವ್ಯವಹಾರಗಳನ್ನು ಕೋರ್ಟ್ ಗಮನಕ್ಕೆ ತರಬೇಕೆಂದು ತಿಳಿಸಿದ್ದೆನು. (Annexure IV – pages 13-15) ಆದರೆ 26Oct2016ರಂದು ಕೋರ್ಟ್ ನಲ್ಲಿ ನಡೆದ ಪ್ರಕ್ರಿಯೆ ಗಮನಿಸಿದರೆ , ಇದ್ಯಾವುದನ್ನೂ ಕೋರ್ಟ್ ಗಮನಕ್ಕೆ ತರದೇ ಪ್ರಾಜೆಕ್ಟ್ ಗೆ ಹಸಿರು ನಿಶಾನೆ ಕೊಡಿಸಲು ಹೊರಟಂತಿದೆ.

9. ಈ ಎಲ್ಲಾ ಮಾಹಿತಿಗಳನ್ನು ಪುನಃ 2nd Nov2016 ರಂದು ಕೋರ್ಟ್ ನಿಂದ ಮುಚ್ಚಿಟ್ಟರೆ ,ಸಾರ್ವಜನಿಕರ ಹಣ ಲೂಟಿಯಾಗುವುದರ ಜೊತೆಗೆ ಜೀವ ಹಾನಿಯೂ ಆಗಬಹುದು. ಮುಂದೆ ಯಾವುದಾದರೂ ಅನಾಹುತ ಸಂಭವಿಸಿ, ಪ್ರಕರಣ ಕೋರ್ಟ್ ಮೆಟ್ಟಲೇರಿದರೂ ಪ್ರಾಜೆಕ್ಟ್ ನಲ್ಲಿ ತೊಡಗಿರುವ ಅಧಿಕಾರಿಗಳು, ಮುಖ್ಯಮಂತ್ರಿ

ಶ್ರೀ ಸಿದ್ದರಾಮಯ್ಯ , ನಗರಾಭಿವೃದ್ಧಿ ಮಂತ್ರಿ ಶ್ರೀ ಕೆ.ಜೆ. ಜಾರ್ಜ್, STUP, L&T, Nagarjuna Constructions - ಯಾರನ್ನೂ ಹೊಣೆಗಾರರನ್ನಾಗಿ ಮಾಡುವುದಿಲ್ಲ. ನಾಗರಿಕರು ಬೇರೆ ಬೇರೆ ವಿಧಾನಗಳಲ್ಲಿ ಸರ್ಕಾರವನ್ನು ಎಚ್ಚರಿಸುತ್ತಿದ್ದರೂ, ಸರ್ಕಾರ ಯೋಜನೆಯನ್ನು ಮುಂದುವರೆಸಿ, ಕಳಪೆ ಕಾಮಗಾರಿಯಿಂದ ಯಾವುದೇ ಅನಾಹುತ ಸಂಭವಿಸಿದರೆ, ಅದು ಅತ್ಯಂತ ದುರದೃಷ್ಟಕರವಾಗುತ್ತದೆ.

10. Annexureಗಳೊಂದಿಗೆ ಈ ಪತ್ರಿಕಾ ಪ್ರಕಟಣೆಯನ್ನು ಹಾಗೂ ಇದನ್ನಾಧರಿಸಿ ಬರುವ ಪತ್ರಿಕಾ ವರದಿಗಳನ್ನು High Court ನ Registrar Generalರವರಿಗೆ ಕಳುಹಿಸಿ 2nd Nov2016 ರಂದು ಕೋರ್ಟ್ ಗಮನಕ್ಕೆ ತರುವಂತೆ ವಿನಂತಿಸಸಲಾಗುವುದು. ಹಾಗೆಯೇ ಆ ಪತ್ರವನ್ನು ಶ್ರೀ ಟಿ. ಎಂ. ವಿಜಯಭಾಸ್ಕರ್ ರವರಿಗೆ ಕಳುಹಿಸಿ ಕೋರ್ಟ್ ನಿಂದ ಮಾಹಿತಿ ಮುಚ್ಚಿಡಬಾರದೆಂದು ತಿಳಿಸಲಾಗುವುದು. ಹಾಗೆಯೇ Advocates' Association ಗಮನಕ್ಕೂ ತಂದು ಸರ್ಕಾರದ ಪರ ವಾದ ಮಂಡಿಸುತ್ತಿರುವ ವಕೀಲರ ಗಮನಕ್ಕೆ ತರಬೇಕೆಂದು ವಿನಂತಿಸಲಾಗುವುದು.

11. ವಿಷಯ ಮುಚ್ಚಿಟ್ಟಿರುವುದರಿಂದ ಸಾರ್ವಜನಿಕ ಹಣ ಲೂಟಿಯಾಗುವುದಲ್ಲದೆ , ಉಂಟಾಗಬಹುದಾದ ಇತರ ಹಾನಿಗಳನ್ನು ಗಮನದಲ್ಲಿರಿಸಿ ACB ತನಿಖೆ ಪ್ರಾರಂಭಿಸಬೇಕು

12. ಈ ವಿಷಯವಾಗಿ ನಾನು ಬರೆದಿರುವ ಎಲ್ಲಾ ಪತ್ರಗಳ ಜೊತೆ ಇದನ್ನೂ ಸಹ World Bank Integrity Vice Presidencyಗೆ ಕಳುಹಿಸಿ ,ಈ ಪ್ರಕಟಣೆಯಲ್ಲಿ ಹೆಸರಿಸಿರುವ ಕಂಪನಿಗಳು ವಿಶ್ವ ಸಂಸ್ಥೆಯ ಯಾವುದೇ ಯೋಜನೆಯಲ್ಲಿ ತೊಡಗಿದ್ದರೆ, ಅವರ ವಿರುದ್ಧ ಕ್ರಮ ತೆಗೆದುಕೊಳ್ಳಲು ವಿನಂತಿಸಲಾಗುವುದು.

13. ಇದನ್ನು ದೇಶದ ಕೆಲವು ಐಎಎಸ್ ಅಧಿಕಾರಿಗಳಿಗೆ ಕಳುಹಿಸಿ, ಈಗಾಗಲೇ ಜನರಲ್ಲಿ ಐಎಎಸ್ ಬಗ್ಗೆ ಮೂಡಿರುವ ಕೆಟ್ಟ ಅಭಿಪ್ರಾಯವನ್ನು ಇನ್ನಷ್ಟು ಕುಸಿಯಲು ಬಿಡದಿರಲು ಹಾಗೂ ಮುಖ್ಯವಾಗಿ ಸಾರ್ವಜನಿಕರ ಹಣ ಲೂಟಿಯಾಗುವುದನ್ನು ತಡೆಯಲು , ಅವರು ತಮ್ಮ ಪ್ರಭಾವ ಬಳಸಿ ಶ್ರೀಎಸ್.ಸಿ.ಕುಂಟಿಯ,ಐಎಎಸ್, ಮುಖ್ಯಕಾರ್ಯದರ್ಶಿಗಳು, ಶ್ರೀ ಮಹೇಂದ್ರ ಜೈನ್, ಐಎಎಸ್, ಅಪರ ಮುಖ್ಯಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಹಾಗೂ ಡಾ. ರಾಜ್ ಕುಮಾರ್ ಖತ್ರಿ, ಐಎಎಸ್,ಆಯುಕ್ತರು, ಬಿ.ಡಿ.ಎ, ರವರು ಭ್ರಷ್ಟ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಹಾಗೂ ಭ್ರಷ್ಟ ನಗರಾಭಿವೃದ್ಧಿ ಮಂತ್ರಿ ಶ್ರೀ ಕೆ.ಜೆ. ಜಾರ್ಜ್ ರವರನ್ನು ಓಲೈಸಯುವುದನ್ನು ಈಗಲಾದರೂ ನಿಲ್ಲಿಸಲು ಪ್ರಯತ್ನಿಸಬೇಕೆಂದು ಕೋರಲಾಗುವುದು

CVCಯ 23rd Sept 2016ರ ಪತ್ರದಂತೆ 31Oct2016ರಂದು ನಿಷ್ಠತೆಯ ಪ್ರಮಾಣ (Integrity Pledge) ಸ್ವೀಕರಿಸಿದನಂತರ , *'ಭ್ರಷ್ಟಾಚಾರ ಜಾಗೃತಿ ಸಪ್ತಾಹ'* ದಲ್ಲಿ 1st Nov 2016ರಂದು ಕಳಂಕಿತ ಭಾಗೀದಾರರನ್ನು ಹೊಂದಿರುವ ಈ ಸ್ಟೀಲ್ ಬ್ರಿಜ್ ಪ್ರಾಜೆಕ್ಟ್ ಗೆ ಶಂಕುಸ್ಥಾಪನೆ ಮಾಡುತ್ತಿರುವುದು ವಿಪರ್ಯಾಸವೇ ಸರಿ . ಕರ್ನಾಟಕದ ನಾಗರಿಕರಿಗೆ ರಾಜ್ಯೋತ್ಸವಕ್ಕೆ ಎಂತಹ ಸ್ಮರಣೀಯ ಉಡುಗೊರೆ. ಇಷ್ಟೆಲ್ಲಾ ಆದರೂ , ಸರ್ಕಾರವು ಯೋಜನೆಯನ್ನು ಕರ್ನಾಟಕದ ಜನತೆಯ ಮೇಲೆ ಹೇರಿದರೆ , ಸಾರ್ವಜನಿಕರರಿಗೆ ಮೋಸ ಮಾಡಲೇಬೇಕೆಂದು ಹಠ ಹಿಡಿದಿರುವ ಪ್ರತಿಯೊಬ್ಬ ವಂಚಕನ ಪ್ರತಿ ನಡೆಯನ್ನು ಸೂಕ್ಷ್ಮವಾಗಿ ಗಮನಿಸಬೇಕೆಂದು ಈ ಪತ್ರಿಕಾ ಪ್ರಕಟಣೆಯ ಮೂಲಕ ಸಾರ್ವಜನಿಕರನ್ನು ಎಚ್ಚರಿಸಲು ಬಯಸುತ್ತೇನೆ.



ಎಂ. ಎನ್. ವಿಜಯಕುಮಾರ್